ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

2

ಇಲಾಖೆ / ವಿಷಯ : DEPARTMENT / SUBJECT: ವಿಧಾನಸಭೆ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ಸಂಯುಕ್ತ ಕರ್ನಾಟಕ ದಿನಾಂಕ : DATE : 10/3/21

# ಕಲಾಪ ಸಲಹಾಸಮಿತಿ ಸಭೆ

10/3/21

- ಕಾದು ಕುಳಿತ ಸಿಎಂ– ಬಾರದ ಸಿದ್ದರಾಮಯ್ಯ
- ಮುಂದುವರಿದ ಕಾಂಗ್ರೆಸ್ ಬಹಿಷ್ಕಾರ

**ಬೆಂಗಳೂರು:** ವಿಧಾನಸೌಧದಲ್ಲಿ ಮಂಗಳವಾರ ನಡೆದ ಕಲಾಪ ಸಲಹಾಸಮಿತಿ ಸಭೆಯನ್ನು ಪ್ರತಿಪಕ್ಷ ಕಾಂಗ್ರೆಸ್ ಮತ್ತೊಮ್ಮೆ ಬಹಿಷ್ಕರಿದೆ. ಹಾಗಾಗಿ ಸಿಎಂ ಯಡಿಯೂರಪ್ಪ ಸುಮಾರು ೧೫ ನಿಮಿಷಗಳ ಕಾಲ ಪ್ರತಿಪಕ್ಷ ನಾಯಕರಿಗಾಗಿ ಕಾದು ಕುಳಿತರೂ ಪ್ರಯೋಜನವಾಗಲಿಲ್ಲ.

ಬಜೆಟ್ ಮಂಡನೆ ವೇಳೆ ಅನೈತಿಕ ಸರ್ಕಾರದ ಅನೈತಿಕ ಬಜೆಟ್‌ವಿ ಎಂದು ಆರೋಪಿಸಿ ಸೋಮವಾರ ಕಲಾಪ ಬಹಿಷ್ಕರಿಸಿ ತೆರಳಿದ್ದ ಕಾಂಗ್ರೆಸ್ ನಾಯಕರು ಸಭಾಧ್ಯಕ್ಷ ವಿಶೇಶರ ಹೆಗಡೆ ಕಾಗೇರಿ ಅವರ ಅಧ್ಯಕ್ಷತೆಯ ಕಲಾಪ ಸಲಹಾ ಸಮಿತಿ ಸಭೆಗೆ ಆಗಮಿಸುವ ನಿರೀಕ್ಷೆ ಹೊಂದಲಾಗಿತ್ತು. ಆದರೆ ಸಭೆಗೆ ಹಾಜರಾಗಲು ಶಾಸಕಾಂಗ ಪಕ್ಷ ತೀರ್ಮಾನಿಸಿದೆ ಎಂದು ಮಂಗಳವಾರ ಮುಂಜಾನೆ ಸಿದ್ದರಾಮಯ್ಯ ಅವರ ಕಚೇರಿ ಪ್ರಕಟಣೆ ತಿಳಿಸಿತ್ತು. ಹಾಗಿದ್ದೂ ರಾಜಕೀಯ ಅನುಭವಿ ಜೊತೆಗೆ ಬಜೆಟ್ ಕಲಾಪದ ಮಹತ ಅರಿತಿ ರುವ ಸಿದ್ದರಾಮಯ್ಯ ಸಭೆಗೆ ಹಾಜರಾಗುತ್ತಾರೆಂದೇ . ಗೃಹಸಚಿವ ಬಸವರಾಜ ಬೊಮ್ಮಾಯಿ ವಿಶಾಸ ವ್ಯಕ್ತಪಡಿಸಿದ್ದರು. ಆದರೆ ಅದು ಹುಸಿಯಾಯಿತು. ಸಧ್ಯದ ವಿದ್ಯಮಾನಗಳನ್ನು ಅವಲೋಕಿಸಿದರೆ ಪ್ರತಿಪಕ್ಷ ಕಾಂಗ್ರೆಸ್ ಸಲಹಾಸಮಿತಿ ಸಭೆ ಮಾತ್ರವಲ್ಲ ಸುಗಮವಾಗಿ ಕಲಾಪ ನಡೆಸಲೂ ಅವಕಾಶ ಮಾಡಿಕೊಡುವ ಲಕ್ಷಣಗಳಿಲ್ಲ.